ಅವರನ್ನೂ ಜತೆ ಕರೆದುಕೊಂಡು ಹೊರಡುತ್ತ ಹೊರಡುತ್ತ ಅದೊಂದು ಆಂದೋಲನದ ರೂಪ ಪಡೆಯುತ್ತದೆ. ಎಲ್ಲರೂ ತಾವು ಕಂಡ ಹರಿಯ ಕುರಿತು ಹೇಳುತ್ತ ಹೋಗುತ್ತಾರೆ. ಸತ್ತ ವ್ಯಕ್ತಿಯಾಗಿದ್ದ ಹರಿ ಒಂದು ಪ್ರತೀಕವಾಗಿ, ಹಲವು ಚಳವಳಿಗಳ ಯಶಸ್ಸಿನ–ವೈಫಲ್ಯಗಳ ಪ್ರತಿನಿಧಿಯಾಗಿ ಬೆಳೆಯುತ್ತ ಹೋಗುತ್ತಾನೆ.

ಹೀಗೆ ಒಂದೊಂದು ಮನೆಗೆ ಹೋದಾಗಲೂ ಒಬ್ಬಳು 'ಅಮ್ಮ' ನಮಗೆ ಕಾಣಿಸುತ್ತಿರುತ್ತಾಳೆ. ಎಲ್ಲಾದರೂ ಇರು ನೀನು ಕ್ಷೇಮದಿಂದಿರುವ ಸುದ್ದಿ ಮುಟ್ಟಿಸು ಎಂದು ಬೇಡುವ ಅಮ್ಮ, ಸಾವಿನ ಸುದ್ದಿ ತಂದ ಸ್ನೇಹಿತರಿಗೆಲ್ಲ ಊಟ ಬಡಿಸುವ ಅಮ್ಮ, 'ಅಯ್ಯೋ ಇಷ್ಟು ಚಿಕ್ಕ ವಯಸ್ಸಿನವರೆಲ್ಲ ಯಾಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಮರುಗುವ ಅಮ್ಮ, ಆಕಳಿಗೆ ಕಲಗಚ್ಚು ಕೊಡುತ್ತ ನೇವರಿಸುವ ಅಮ್ಮ, ಮಗನಿಗೆ ಸಂಚಿಯಿಂದ ದುಡ್ಡು ತೆಗೆದುಕೊಡುವ ಅಮ್ಮ, ಮಗನನ್ನು ಪೊಲೀಸರು ಹಿಂಸಿಸಿದ್ದನ್ನು ನೋಡಿ ಹುಚ್ಚು ಹಿಡಿದು ನಡುಗುತ್ತಿರುವ ಅಮ್ಮ, ಮಗನ ಸಾವಿನ ಸುದ್ದಿಯನ್ನೂ ನುಂಗಿಕೊಂಡು, ಮಗನಂಥ ಹಲವರ ಬೆನ್ನಿಗಿಟ್ಟುಕೊಂಡು ನಡೆಯುವ ಅಮ್ಮ... ಹರಿಗೆ ಎಷ್ಟು ಅವತಾರಗಳೋ ಅಮ್ಮಂದಿರ ಮಮತೆಗೂ ಅಷ್ಟೇ ಮುಖಗಳು. ಆದರೆ ಈ ಯಾವ ಅಮ್ಮಂದಿರೂ ಅತಿಯಾಗಿ ಭಾವುಕರಾಗುವುದಿಲ್ಲ. ಗೋಳಾಡುವುದಿಲ್ಲ. ಕಣ್ಣೀರ ಧಾರೆ ಹರಿಸುವುದಿಲ್ಲ. ಪುರುಷನ್‌ನನ್ನು ಕಳಿಸಲು ಅವನ ಗೆಳತಿಗೆ ಇರುವಷ್ಟು ವೇದನೆ ತಾಯಿಗಿಲ್ಲ; ಅಥವಾ ಅದನ್ನು ತೋರಿಸಿಕೊಳ್ಳುವುದಿಲ್ಲ.

ಹರಿಯ ಗೆಳೆಯರನ್ನು ಹುಡುಕಿ ಹೋಗುವಾಗ ಆಯಾ ಪ್ರದೇಶದ ಸಾಂಸ್ಕೃತಿಕ ಇತಿಹಾಸವನ್ನು, ಚಳವಳಿಗಳನ್ನು, ಕಾರ್ಮಿಕರ ಹೋರಾಟಗಳನ್ನು, ವ್ಯವಸ್ಥೆಯ ಕ್ರೌರ್ಯಗಳನ್ನೂ, ಅದನ್ನು ಮೀರಲು ಹವಣಿಸಿ ದಮನಗೊಂಡ ಜನಪರ ಚಳವಳಿಗಳನ್ನು, ಅವುಗಳು ನಿಧಾನಕ್ಕೆ ದುರ್ಬಲವಾಗಿ ಆತ್ಮಹತ್ಯೆಯ ದಾರಿ ಹಿಡಿದಿರುವುದನ್ನೂ ಸಿನಿಮಾ ಕಾಣಿಸುತ್ತ ಹೋಗುತ್ತದೆ. ಈ ಇಡೀ ಪ್ರಯಾಣ ಪುರುಷನ್ ತನ್ನ ತಾಯಿಗೆ ಬರೆದ ಪತ್ರದ ರೀತಿಯಲ್ಲಿ ನಿರೂಪಿತಗೊಂಡಿದೆ.

ಎಲ್ಲಿಯೂ ಪ್ರೇಕ್ಷಕರನ್ನು ಕಥೆಯ ಜತೆ ಭಾವುಕವಾಗಿ ಮೈಮರೆಯದ ಹಾಗೆ, ಕಣ್ಣುತುಂಬಿ ಎದುರಿನ ಸತ್ಯ ಮಸುಕಾಗದ ಹಾಗೆ ಸಂಯಮದಿಂದ ಕಥನವನ್ನು ಕಟ್ಟುತ್ತ ಹೋಗುತ್ತಾರೆ ನಿರ್ದೇಶಕರು. ಹರಿಯ ಆತ್ಮಹತ್ಯೆಯ ಸುದ್ದಿಯನ್ನು ಒಬ್ಬ ಒಡನಾಡಿಗೆ ತಲುಪಿಸಿದಾಗ ಅವನ ತೊಡೆಯ ಮೇಲಿದ್ದ ಮಗು ಕೇಳುತ್ತದೆ 'ಅಜ್ಜಾ, ಆತ್ಮಹತ್ಯೆ ಅಂದ್ರೇನು?', 'ಕುತ್ತಿಗೆಗೆ ಹಗ್ಗ ಕಟ್ಟಿಕೊಂಡು ನೇಣುಬೀಳುವುದು.' 'ಯಾಕೆ ಜನರು ಆತ್ಮಹತ್ಯೆ ಮಾಡಿಕೊಳ್ತಾರೆ?' – ಮಗುವಿನ ಪ್ರಶ್ನೆಗೆ ಉತ್ತರ ಯಾರ ಬಳಿಯೂ ಇಲ್ಲ. ಇಂಥ ಭಾವತೀವ್ರ ಸನ್ನಿವೇಶವನ್ನೂ ಯಾವ ಸಿನಿಮೀಯ ಉದ್ವೇಗಕ್ಕೂ ಎಡೆ ಇರದ ಹಾಗೆ ಅತ್ಯಂತ ಸಹಜವಾಗಿಯೇ ತೋರಿಸುತ್ತಾರೆ.

ಒಬ್ಬರಿಂದ ಇನ್ನೊಬ್ಬರಿಗೆ ದಾಟಿ, ಒಂದೂರಿಂದ ಇನ್ನೊಂದೂರಿಗೆ ದಾಟಿ ಹರಿಯ ಸಾವಿನ ಸುದ್ದಿಯನ್ನು ಹೊತ್ತುಬಂದವರು ಅವನ ಊರು ಕೊಚ್ಚಿಗೆ ಬರುವಷ್ಟರಲ್ಲಿ ಹಲಜನರ ಗುಂಪಾಗಿರುತ್ತದೆ. 'ಮಗ ತೀರಿಕೊಂಡಿದ್ದನ್ನು ಅಮ್ಮನಿಗೆ ಹೇಗೆ ಹೇಳುವುದು?' ಅದನ್ನು ಅವಳು ಹೇಗೆ ಸ್ವೀಕರಿಸುತ್ತಾಳೆ?' ಎಂಬೆಲ್ಲ ಗೊಂದಲ ಅವರಿಗಿದೆ. ಈ ಗೊಂದಲದಲ್ಲಿಯೇ ಅವರು ಅಮ್ಮನ ಬರುವಿಗಾಗಿ ಕಾಯುತ್ತ ಆತ್ಮಾವಲೋಕನದಲ್ಲಿ ತೊಡಗುತ್ತಾರೆ. ಪುರುಷನ್ ತನ್ನಮ್ಮನಿಗೆ ಬರೆಯುತ್ತ 'ಚರ್ಚೆಗಳು ನಮ್ಮಲ್ಲಿ ಆಶಾವಾದವನ್ನು ಹುಟ್ಟಿಸುತ್ತವೆ. ವೈದ್ಯಕೀಯ ಕ್ಷೇತ್ರ ಖಾಸಗಿಯವರ ಪಾಲಾಗಬಾರದು ಎಂದು ವಿದ್ಯಾರ್ಥಿಗಳು ಹೋರಾಡುತ್ತಾರೆ, ಕಾಲು ಕಳೆದುಕೊಂಡ ಕಾರ್ಮಿಕನ ಪರವಾಗಿ ಉಳಿದ ಕಾರ್ಮಿಕರು ಹೋರಾಡಿ ಗೆಲ್ಲುತ್ತಾರೆ. ಆದರೆ ಹೀಗೆ ನಡೆದ ಹಲವು ಹೋರಾಟಗಳು ನಮಗೆ ಯಾವ ಪಾಠವನ್ನು ಕಲಿಸಿವೆ? ನಮ್ಮ ಗೆಲುವುಗಳು